ಬದುಕಿದ್ದಾಗಲೇ ದಂತಕಥೆಯಾದ, ಕಂಡು ಕೇಳದ ವ್ಯಕ್ತಿತ್ವ ಮತ್ತು ಜೀವನ ವಿಧಾನಗಳ ಕಾರಣಗಳಿಂದಾಗಿ ಕುತೂಹಲಗೊಂಡ ದೇಶವಿದೇಶಗಳ ಕಲಾವಿದರು ಐತಿಹಾಸಿಕ, ಸಮಕಾಲೀನ, ಮತ್ತು ಭವಿಷ್ಯದ ನಾಳೆಗಳ ಪ್ರಶ್ನೆಗಳ ಕಾರಣಗಳಿಂದಾಗಿ ಗಾಂಧೀಜಿ ಅವರನ್ನು ಚಿತ್ರಿಸಿದ್ದಾರೆ.

## 2

ಬಿಡುವಿಲ್ಲದ ನಡೆಗಳ ಗಾಂಧೀಜಿಯವರನ್ನು, ಅವರ ರೂಪವನ್ನು ಒಮ್ಮೆಯಾದರೂ ನೋಡಬೇಕೆಂದುಕೊಳ್ಳದ ಭಾರತೀಯರು ಯಾರು? ಇಲ್ಲಿ ಗಾಂಧಿಯವರ ಸಂಬಂಧಿ, ಸೋದರ ಮೊಮ್ಮಗ ಧಿರೇನ್ ಗಾಂಧಿ ನೆನಪಾಗುತ್ತಾರೆ. ಅವರ 'ಮಹಾತ್ಮಗಾಂಧಿಯವರ ಪ್ರಾರ್ಥನೆ ಮತ್ತು ಇತರ ರೇಖಾಚಿತ್ರಗಳು' 1945ರಲ್ಲಿ ಮುಂಬೈನ 'ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ'ಯ ಮೂಲಕ ಪ್ರಕಟಗೊಂಡವು. ಗಾಂಧೀಜಿಯವರಷ್ಟೇ ಸರಳ ಸುಂದರ ಪೆನ್ಸಿಲ್ ರೇಖಾಚಿತ್ರಗಳಿವು.

ಗಾಂಧಿಯವರ ನೆರಳಿನಲ್ಲಿ ಅಹಮದಾಬಾದಿನಲ್ಲಿ ಬೆಳೆದ, ಗಾಂಧಿಯವರಿಂದ 'ಧೀರೇನ್' ಅಥವಾ 'ಧೀರು' ಎಂದು ತಮ್ಮ ಪತ್ರ ವ್ಯವಹಾರಗಳಲ್ಲಿ ಉಲ್ಲೇಖಗೊಂಡಿರುವ ಧೀರೇನ್ ಗಾಂಧಿ, ಕಲೆಯಲ್ಲಿ ವೃತ್ತಿಪರತೆಯನ್ನು ಸಾಧಿಸಲು ಹೊರಟವರು. ಎಳವೆಯಲ್ಲೇ ಸಾಬರಮತಿ ಆಶ್ರಮದಲ್ಲಿ ಚಿತ್ರಿಸುವ ಆಸಕ್ತಿ ತೋರಿದವರು. 1917–1930ರ ನಡುವೆ ಈ ಆಶ್ರಮವನ್ನು ಗಾಂಧಿ ತಮ್ಮ ಮನೆ ಎಂದು ಹೇಳಿಕೊಳ್ಳುತ್ತಿದ್ದರು. 1933ರಲ್ಲಿ ಧೀರೇನ್ ಗಾಂಧಿಯನ್ನು ಶಾಂತಿನಿಕೇತನಕ್ಕೆ ಕಲಿಯಲು ರವೀಂದ್ರನಾಥ ಟ್ಯಾಗೋರರ ಬಳಿ ಕಳುಹಿಸಿಕೊಟ್ಟರು. ಗಾಂಧಿ ಅವರ ಆ ಸಂದರ್ಭದ ಪತ್ರವೊಂದು ಕಲೆಯ ಕುರಿತ ಅವರ ಗಣನೀಯ ಅಭಿಪ್ರಾಯಗಳನ್ನು ಒಳಗೊಂಡಿದೆ: 'ಚಿತ್ರಕಲೆಯಲ್ಲಿ ಎರಡು ವಿಧಗಳು: ದೈವೀಕ ಮತ್ತು ರಾಕ್ಷಸಿಕ, ಸಾತ್ವಿಕ ಮತ್ತು ರಾಜಸಿಕ, ನೈತಿಕ ಮತ್ತು ಅನೈತಿಕ. ಚಿತ್ರಕಲೆಯು ಮೌನವಾದ ಸಂಗೀತವೇ ಸರಿ. ಚಿತ್ರಕಲೆಯು ನಮ್ಮ ಭಾವಲೋಕವನ್ನು ಉತ್ತೇಜಿಸುತ್ತದೆ ಎಂಬುದನ್ನು ನಾವು ನಮ್ಮ ಅನುಭವದಿಂದ ಹೇಳಬಹುದು. ನಮ್ಮ ಭಾವೋದ್ರೇಕಗಳನ್ನು ಶಾಂತಗೊಳಿಸುವಂತಹ ಚಿತ್ರಗಳನ್ನು ಕಲಾವಿದರು ಚಿತ್ರಿಸಿದಾಗ ಅವರ ಕಲೆಯ ಶಕ್ತಿಯ ಪ್ರಭಾವವನ್ನು ಅತಿ ಒರಟು ಜನರಲ್ಲಿಯೂ ನಾವು ಕಾಣಬಹುದು' ಎಂಬ ಅಭಿಪ್ರಾಯಗಳ ಪತ್ರ ಅದು. ಕೆಲವೇ ವರ್ಷಗಳಲ್ಲಿ ಧೀರೇನ್ ಆ ಸಂದರ್ಭದ ಅಗತ್ಯವಾಗಿದ್ದ 'ಗಾಂಧಿ ಸಂವೇದನಾಶೀಲತೆ'ಯನ್ನು ಅರಗಿಸಿಕೊಂಡು ಚಿತ್ರಿಸಿದರು. ಗಾಂಧಿಯವರ ಚಲನವಲನಗಳ ರೂಪಗಳನ್ನು, ಪ್ರಾರ್ಥನೆ, ನಿದ್ರೆ ಇತ್ಯಾದಿಗಳ ಸಂದರ್ಭದ ಅವರ ಚಿತ್ರಗಳನ್ನು ರೇಖಿಸಿದರು. ಬಹುಮುಖ್ಯವಾಗಿ 1943ರಲ್ಲಿ 21 ದಿನಗಳ ಕಾಲದ ಉಪವಾಸದ ಚಿತ್ರಗಳೇ ಅಲ್ಲದೆ, ಪುಣೆಯ ಆಗಾಖಾನ್ ಅರಮನೆಯಲ್ಲಿ ಕಲೋನಿಯಲ್ ಪ್ರಿಸನರ್ ಆಗಿದ್ದ ಸಂದರ್ಭದ ಚಿತ್ರಗಳು ಮೂಡಿಬಂದವು. ಹಲವಾರು ಕೃತಿಗಳ ಮೇಲೆ




ಟೈಮ್ ಪತ್ರಿಕೆಯ ಮುಖಪುಟ




ರಂಗಾ ಅವರ ರೇಖಾಚಿತ್ರದ ಬಳಕೆಯ ಅಂಚೆಚೀಟಿ